ಮಹಿಳಾದಿನ ವಿಶೇಷ

# ಭರತನಾಟ್ಯದ ಸ್ವಾತಿಮುತ್ತು



**ಭರತನಾಟ್ಯದ 'ಕಲಾಕ್ಷೇತ್ರ' ಶೈಲಿಯಲ್ಲಿ ನೃತ್ಯ ಮಾಡುವ ಸ್ವಾತಿ, ಒಂದು ಸಾವಿರಕ್ಕೂ ಹೆಚ್ಚು ಏಕವ್ಯಕ್ತಿ ನೃತ್ಯಪ್ರದರ್ಶನ ನೀಡಿರುವ ಅಪರೂಪದ ಕಲಾವಿದೆ. ತಮ್ಮ ನೃತ್ಯಪ್ರೀತಿಯ ಬಗ್ಗೆ ಅವರು ಸ್ಫೂರ್ತಿದಾಯಕ ಮಾತುಗಳನ್ನಾಡಿದ್ದಾರೆ.**

**■ ಉಮಾ ಅನಂತ್**

ಕಲಾವಿದರಿಗೆ ಒಮ್ಮೊಮ್ಮೆ ಅವಕಾಶಗಳು ಹೇಗೆ, ಎಲ್ಲಿ ಒದಗಿಬರುತ್ತವೆ ಎಂದು ಊಹಿಸುವುದು ಕಷ್ಟ. ಚನ್ನರಾಯಪಟ್ಟಣ ಮೂಲದ ಭರತನಾಟ್ಯ ಕಲಾವಿದೆ ಸ್ವಾತಿ ಭಾರದ್ವಾಜ್ ಅವರಿಗೆ ನೃತ್ಯ ಮಾಡಲು ಸಿಕ್ಕಿದ ಅಪರೂಪದ ಅವಕಾಶವನ್ನು ಗಮನಿಸಿದರೆ 'ಕಲೆ ಕರಗತವಾಗಿದ್ದರೆ ಅವಕಾಶದ ಬಾಗಿಲು ತಾನೇ ತಾನಾಗಿ ತೆರೆದುಕೊಳ್ಳುತ್ತದೆ' ಎಂಬ ಮಾತು ನಿಜವೆನಿಸುತ್ತದೆ.

ಇಂಡೊನೇಷ್ಯಾದಲ್ಲಿ 2024ರ ಜನವರಿ 26ರಂದು ನಡೆದ 'ಗ್ಲೋಬಲ್ ಎಕನಾಮಿಕ್ ಫೋರಂ' ಆಯೋಜಿಸಿದ 59ನೇ ಅಂತರರಾಷ್ಟ್ರೀಯ ನೃತ್ಯೋತ್ಸವದಲ್ಲಿ, ವಿಶ್ವದ ವಿವಿಧ ಭಾಗಗಳ 50 ನೃತ್ಯ ಕಲಾವಿದರು ಭಾಗವಹಿಸಿದ್ದರು. ಸ್ವಾತಿ ಪಿ. ಭಾರದ್ವಾಜ್ ಇದೇ ವೇದಿಕೆಯಲ್ಲಿ ಭರತನಾಟ್ಯ ಪ್ರದರ್ಶನ ನಡೆಸಿಕೊಟ್ಟರು. ಈ ಪ್ರದರ್ಶನದಲ್ಲಿ ಸ್ವಾತಿಗೆ ಪ್ರಶಸ್ತಿ ಸಿಕ್ಕಿದ್ದು ಬಹಳ ಅಪರೂಪದ ಸಂಗತಿ.

ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಏಕವ್ಯಕ್ತಿ ನೃತ್ಯಪ್ರದರ್ಶನ ನೀಡಿರುವ ಸ್ವಾತಿ, ಒಮ್ಮೆ ಕಾರ್ಯಕ್ರಮ ನಿಮಿತ್ತ ಅಂಡಮಾನ್ ನಿಕೋಬಾರ್‌ಗೆ ತೆರಳುತ್ತಿದ್ದರು. ಅಲ್ಲಿಗೆ ಹೋಗುವಾಗ ಶಿಪ್‌ನಲ್ಲಿ ಕ್ಯಾಪ್ಟನ್ ಜೊತೆ ಮಾತನಾಡುತ್ತಿರುವಾಗ, ಭರತನಾಟ್ಯ ಪ್ರದರ್ಶನಕ್ಕೆ ಹೋಗುತ್ತಿರುವುದಾಗಿ ಸ್ವಾತಿ ತಿಳಿಸಿದರು. ಆಗ ಆ ಕ್ಯಾಪ್ಟನ್, ಕ್ರೂಸ್‌ನೊಳಗೇ ನೃತ್ಯ ಮಾಡುವಂತೆ ಕೇಳಿಕೊಂಡರು. ಅವರ ಕೋರಿಕೆಯ ಮೇರೆಗೆ 'ಜೈ ಭಾರತ ಜನನಿಯ ತನುಜಾತೆ' ನಾಡಗೀತೆಯನ್ನು ನೃತ್ಯದಲ್ಲಿ ಅಭಿನಯಿಸಿದ್ದು ಸ್ವಾತಿ ಅವರಿಗೆ ಅವಿಸ್ಮರಣೀಯ ಅನುಭವವಾಗಿ ಉಳಿದಿದೆ. ಸ್ವಾತಿ ಅವರ ನೃತ್ಯ ಪಯಣದಲ್ಲಿ ಇಂತಹ ಹಲವಾರು ಮರೆಯಲಾಗದ ಅನುಭವಗಳಿವೆ.

'2010ರ ಡಿಸೆಂಬರ್ 26ರಂದು ಹೈದರಾಬಾದಿನಲ್ಲಿ ನಡೆದ ಅಂತರರಾಷ್ಟ್ರೀಯ ಕೂಚುಪುಡಿ ನೃತ್ಯೋತ್ಸವದಲ್ಲಿ ಭಾಗವಹಿಸಿದಾಗ ನನಗೆ ಕೇವಲ 10 ವರ್ಷ. ಅಲ್ಲಿ ಒಟ್ಟು 2,850 ನೃತ್ಯ ಕಲಾವಿದೆಯರು ಭಾಗವಹಿಸಿ, ನಿರಂತರವಾಗಿ 4 ಗಂಟೆ 26 ನಿಮಿಷಗಳ ನೃತ್ಯ ಪ್ರದರ್ಶನ ನೀಡಿದ್ದು ಗಿನ್ನೆಸ್ ದಾಖಲೆಯಾಗಿದೆ. ಆ ಕಾರ್ಯಕ್ರಮವೂ ಅವಿಸ್ಮರಣೀಯ' ಎನ್ನುತ್ತಾರೆ ಸ್ವಾತಿ.

''ಶ್ರೀಲಂಕಾ ಸರ್ಕಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ನೃತ್ಯ ಮಾಡುವ ಅವಕಾಶ ಸಿಕ್ಕಿದ್ದು, ಅಲ್ಲಿ ಆತಿಥೇಯ ದೇಶದ ಮಾಜಿ ಅಧ್ಯಕ್ಷರು ಅತಿಥಿಯಾಗಿ ಬಂದು ನೃತ್ಯ ಪ್ರದರ್ಶನವನ್ನು ಶ್ಲಾಘಿಸಿದ್ದು ಕೂಡ ಹೆಮ್ಮೆಯ ವಿಚಾರ. ಒಂದು ಸಾವಿರ ಏಕವ್ಯಕ್ತಿ ನೃತ್ಯ ಪ್ರದರ್ಶನ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕದ ರಾಜ್ಯಪಾಲರಿಂದ 'ರಾಜ್ಯ ಪ್ರಶಸ್ತಿ'ಯೂ ಲಭಿಸಿದ್ದು ನನ್ನ ಸೌಭಾಗ್ಯ'' ಎಂದು ಹೇಳುತ್ತಾರೆ ಸ್ವಾತಿ.

ಭರತನಾಟ್ಯದ 'ಕಲಾಕ್ಷೇತ್ರ' ಶೈಲಿಯಲ್ಲಿ ನೃತ್ಯ ಮಾಡುವ ಸ್ವಾತಿ ಅವರಿಗೆ, ಪತಿ ಸಿನಿಮಾಟೊಗ್ರಾಫರ್ ಆಗಿರುವ ಚಿನ್ಮಯ ಹೆಗಡೆ, ತಬಲಾ ಕಲಾವಿದರಾಗಿರುವ ಸುರೇಶ್ ಹೆಗಡೆ ಹಾಗೂ ಹಿಂದೂಸ್ತಾನಿ ಗಾಯಕಿಯಾಗಿರುವ ಗೀತಾ ಹೆಗಡೆ ಅವರ ಸಂಪೂರ್ಣ ಸಹಕಾರವಿದೆ. ಸದ್ಯ ಬೆಂಗಳೂರಿನ ವಿಜಯನಗರ ಹಾಗೂ ಚನ್ನರಾಯಪಟ್ಟಣದಲ್ಲಿ ಸುಮಾರು 450 ಮಕ್ಕಳಿಗೆ ಭರತನಾಟ್ಯ ಹೇಳಿಕೊಡುತ್ತಿದ್ದಾರೆ. ■

## ಸವಾಲಿನಿಂದ ಆರಂಭವಾದ ಕಲಿಕೆ

ಸ್ವಾತಿ ಅವರು ನೃತ್ಯ ಕಲಿಕೆ ಆರಂಭ ಮಾಡಿದ ಹಿನ್ನೆಲೆಯೂ ರೋಚಕವೇ. 2001–2002ರಲ್ಲಿ ಚನ್ನರಾಯಪಟ್ಟಣದ ಒಂದು ದೇವಸ್ಥಾನದಲ್ಲಿ ಭರತನಾಟ್ಯ ಪ್ರದರ್ಶನ ನಡೆಯುತ್ತಿತ್ತು. ಅಲ್ಲಿದ್ದ ಭರತನಾಟ್ಯ ಗುರುವನ್ನು ಸ್ವಾತಿ ತಾಯಿ ಅನಿತಾ, ಮೂರು ವರ್ಷದ ತಮ್ಮ ಮಗಳಿಗೂ ಭರತನಾಟ್ಯ ಹೇಳಿಕೊಡಿ ಎಂದು ಕೇಳಿಕೊಂಡರಂತೆ. ಆಗ ಅವರು, 'ನೀವು ಏನು ಕೆಲಸ ಮಾಡ್ತೀರಿ' ಅಂತ ಕೇಳಿದರಂತೆ. 'ಭರತನಾಟ್ಯ ಬಹಳ ಖರ್ಚನ್ನು ನಿರೀಕ್ಷಿಸುವ ಕಲೆ. ಇದನ್ನು ಎಂಜಿನಿಯರ್, ಡಾಕ್ಟರ್ ಪೋಷಕರ ಮಕ್ಕಳಿಗೆ ಮಾತ್ರ ಕಲಿಸುತ್ತೇವೆ' ಎಂದರಂತೆ. ಆ ಮಾತನ್ನು ಸವಾಲಾಗಿ ಸ್ವೀಕರಿಸಿದ, ಶಾಲಾ ಅಧ್ಯಾಪಕಿಯೂ ಆಗಿರುವ ಸ್ವಾತಿ ಅವರ ತಾಯಿ ಮಗಳಿಗೆ ನೃತ್ಯ ಕಲಿಸಿದ್ದರು. ಈಗ ಸ್ವಾತಿ ಭರತನಾಟ್ಯದಲ್ಲಿ ಭರವಸೆಯ ಕಲಾವಿದೆ.